ನಾನು ಏಳನೆಯ ಕ್ಲಾಸಿನಲ್ಲಿ ಓದುತ್ತಿದ್ದಾಗ ನಮ್ಮೂರಿಗೆ ಕರೆಂಟು ಬಂದಿದ್ದು. ಚಿಕ್ಕವನಿದ್ದಾಗ ಅಪ್ಪಟ ಹಳ್ಳಿಗಮಾರನಾಗಿದ್ದವನು. ಅಂಥ ಗುಣಲಕ್ಷಣಗಳು ಈಗಲೂ ನಮ್ಮಲ್ಲಿವೆಯೆಂದು ಕೆಲವರು ನನ್ನ ಹಿಂದೆ ಮಾತನಾಡಿಕೊಳ್ಳುವುದುಂಟು. ನನ್ನ ತಂದೆ ತಾಯಿಗಳಿಬ್ಬರೂ ಹೆಬ್ಬೆಟ್ಟು ಪಾರ್ಟಿಗಳೇ. ಮೆದುಳಲ್ಲಿ ಒಂದಿಷ್ಟು ಅಕ್ಷರಗಳು ನಾಟುತ್ತಿದ್ದರೂ ಸ್ಕೂಲೆಂದರೆ ಅಷ್ಟಕ್ಕಷ್ಟೆ ನನಗೆ. ತಂಗಳುಂಡು, ಗೊಣ್ಣೆ ಸುರಿಸಿಕೊಂಡು ಹೊಲ, ಗದ್ದೆ, ಆಲೆಮನೆ, ಕಣಗಳಲ್ಲಿ ಅಡ್ಡಾಡಿಕೊಂಡಿರುವ ಕಾಯಕದಲ್ಲಿ ಹಿಗ್ಗಿನಿಂದ ನಿರತವಾಗಿರುತ್ತಿದ್ದೆ. ಸ್ಕೂಲನ್ನು ಕಂಡುಹಿಡಿದವನೇನಾದರೂ ಸಿಕ್ಕಿದರೆ ಹಿಡಿದು ಕೊಂದುಹಾಕಿ ಬಿಡಬೇಕೆನ್ನುವ ಸಿಟ್ಟು ಸ್ಕೂಲಿಗೆ ಹೋಗುತ್ತಿದ್ದ ಎಲ್ಲಾ ಹುಡುಗರಲ್ಲೂ ಬಲವಾಗಿ ಹೊಗೆಯಾಡುತ್ತಿತ್ತು. ನಾನು ಸ್ಕೂಲಿಗೆ ಹೋಗುವುದಿಲ್ಲವೆಂದು ಮಂಡಿಗೆ ಬಿದ್ದಾಗಲೆಲ್ಲ ನಮ್ಮಪ್ಪನಿಂದ ಕಡ್ಡಾಯವಾಗಿ ಬಾರುಗೋಲಿನ ಏಟುಗಳು ಬೀಳುತ್ತಿದ್ದವು. ಪ್ರೈಮರಿ ಸ್ಕೂಲು ಪೂರೈಸಿ ಮಿಡ್ಲಿಸ್ಕೂಲಿಗೆ ಕಾಲಿಟ್ಟ ವರ್ಷದ ನಂತರ ಅಂದರೆ ಆರನೆಯ ತರಗತಿಯಿಂದ ಸ್ಕೂಲು ಅಕ್ಷರಗಳು ಪ್ರಿಯವಾಗತೊಡಗಿದವು. ಅಂಥ ಇಂಥ ಹಳ್ಳಿಗುಗ್ಗುವಾದ ನನಗೆ ಕತೆ ಬರೆಯುವ ಅಪರಿಮಿತವಾದ ಗೀಳು ಹೇಗೆ ಅಂಟಿಕೊಂಡಿತೆಂಬುದೊಂದು ನನಗೇ ಅರ್ಥವಾಗದ ಸೋಜಿಗದ ಸಂಗತಿ. ಕತೆ ಬರೆಯುವುದೊಂದು ಆಟ, ಧ್ಯಾನ, ನಗು, ಸಂಭ್ರಮ, ಚೆಲ್ಲಾಟ ಎಲ್ಲವೂ ನನಗೆ. ಮತ್ತೂ ಹೇಳಬೇಕೆಂದರೆ, ನಮ್ಮ ಬಯಲು ಸೀಮೆಯ ಹಳ್ಳಿಗಾಡಿನ ಅತ್ಯಂತ ದೊಡ್ಡ ಸಿಹಿ ತಿಂಡಿ ಹೋಳಿಗೆಯನ್ನು ಎಮ್ಮೆಯ ತುಪ್ಪದಲ್ಲಿ ಅದ್ದಿ ತಿಂದಂತೆ. ಹಾಗಾಗಿಯೇ ನನ್ನ ವೃತ್ತಿಗೂ ನ್ಯಾಯ ಒದಗಿಸುತ್ತಾ 1984ರಿಂದ ಇದುವರೆಗೂ ಸುಮಾರು 500 ಕತೆಗಳನ್ನು ಬರೆಯಲು ಸಾಧ್ಯವಾಯಿತೇನೋ ಎಂಬ ಹೆಮ್ಮೆ ನನಗೆ. ಇಂಥ ಕತೆ ಬರೆಯುವ ಅಪಾರ ಹಂಬಲದಲ್ಲಿ ಕತೆ ಬರೆಯುವ ಪ್ರಕ್ರಿಯೆ ಎಷ್ಟರ ಮಟ್ಟಿಗೆ ಪ್ರಜ್ಞಾಪೂರ್ವಕ? ಎಂಬ ಪ್ರಶ್ನೆಗೆ ಖಂಡಿತವಾಗಿಯೂ ನನ್ನಲ್ಲಿ ಸ್ಪಷ್ಟ ಉತ್ತರವಿಲ್ಲ. ನನ್ನ ಹಳ್ಳಿಗಾಡಿನ ಬಾಲ್ಯದ ದಿನಗಳಲ್ಲಿ ಮನೆಯ ಮುಂದೆ ಅಂಗಾತ ಮಲಗಿ ಆಕಾಶ ನೋಡುತ್ತಾ ಹಿರಿಯರು ಕಟ್ಟಿಕೊಡುತ್ತಿದ್ದ ಕತೆಗಳಲ್ಲಿ ಮುಳುಗಿ ನಿದ್ದೆಗೆ ಜಾರಿಹೋಗುತ್ತಿದ್ದ ಸನ್ನಿವೇಶಗಳು ಈಗಲೂ ವಿಸ್ಮಯವೇ ನನಗೆ. ಅನಕ್ಷರಸ್ಥ ಎದೆಗಳಲ್ಲಿ ಹುಟ್ಟುತ್ತಿದ್ದ ಮೈ ನವಿರೇಳಿಸುವ ರೋಮಾಂಚಕಾರಿ ಕತೆಗಳ ಜಾಡು ಹಿಡಿಯಲು ನಾನು ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದೇನೆ. ನಿರಂತರವಾಗಿ ಬದಲಾಗುತ್ತಿರುವ ಬದುಕಿನ ಚಹರೆಗಳನ್ನು ಗ್ರಹಿಸುವುದು ಸಾಹಿತ್ಯದಿಂದ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆಂಬುದೇ ಎಲ್ಲಾ ಬರಹಗಾರರ ಮುಂದಿರುವ ಸೂಕ್ಷ್ಮವಾದ ಪ್ರಶ್ನೆ.

ಅನುಭವಗಳಿಂದ ವಂಚಿತವಾಗಿ ರಚನೆಗೊಂಡ ಯಾವ ಸಾಹಿತ್ಯ ಪ್ರಕಾರವೂ, ಸಾಹಿತ್ಯ ಕೃತಿಯೂ ಆಂತರ್ಯದಲ್ಲಿ ಗಟ್ಟಿಯಾಗಿರುವುದಿಲ್ಲವೆಂಬುದು ನನ್ನ ದೃಢವಾದ ವೈಯಕ್ತಿಕ ಅಭಿಪ್ರಾಯ. ಒಬ್ಬ ಬರಹಗಾರನ ಬಾಲ್ಯ, ಪರಿಸರ, ಅನುಭವ, ಭಾಷೆ, ಕಷ್ಟ, ಸುಖ, ಎಲ್ಲವೂ ಆತನ ಸಾಹಿತ್ಯ ಕೃಷಿಗೆ ಗಾಳಿ, ನೀರು, ಗೊಬ್ಬರದಂತೆ ನೆರವಾಗುತ್ತವೆ. ನನ್ನ ಕಥಾನಕ ಮತ್ತು ಇನ್ನಿತರ ಗದ್ಯ ಸಾಹಿತ್ಯದಲ್ಲಿ ಅನುಭವಗಳು ಯಥೇಚ್ಛವಾಗಿ ಪ್ರಕಟಗೊಂಡಿವೆ. ನಾನು ಮಿಡ್ಲ್‌ಸ್ಕೂಲಿನ ಏಳನೆಯ ತರಗತಿಯಲ್ಲಿ ರ‍್ಯಾಂಕು ಪಡೆದುಕೊಂಡಿದ್ದರಿಂದ ಹೈಸ್ಕೂಲು ಓದಲೆಂದು ನಮ್ಮಪ್ಪ ಬೆಂಗಳೂರಿಗೆ ಸಾಗಹಾಕಿದ್ದ. ನಮ್ಮ ದೊಡ್ಡಪ್ಪನ ಮಗ ಬೆಂಗಳೂರಿನ ಕಾರ್ಪೊರೇಶನ್‌ನಲ್ಲಿ ಸಣ್ಣ ಹುದ್ದೆಯಲ್ಲಿದ್ದು ಕಾಟನ್‌ಪೇಟೆಯ ವಠಾರವೊಂದರಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಗೊಣ್ಣೆ ಸುರಿಸಿಕೊಂಡೇ ಮಾಸಿದ ಬಟ್ಟೆಯಲ್ಲಿ, ಬರಿಗಾಲಲ್ಲಿ ಬೆಂಗಳೂರಿಗೆ ಕಾಲಿಟ್ಟ ನಾನು ಇನ್ನಿಲ್ಲದಷ್ಟು ಕಕರು ಮಕರುಗೊಂಡಿದ್ದೆ. ವಠಾರದಲ್ಲಿ, ಸ್ಕೂಲಿನಲ್ಲಿ ನನ್ನನ್ನು ಎಲ್ಲರೂ ವಿಚಿತ್ರವಾಗಿ ನೋಡುತ್ತಿದ್ದರು. ಮೇಷ್ಟ್ರುಗಳು ಪಾಠ ಮಾಡುತ್ತಿದ್ದರೆ ಊರಿನ ಎಮ್ಮೆ, ಗದ್ದೆ, ಆಲೆಮನೆ, ಕಣ